ಒ ಎಸ್ 132-2016

ಪಿಡಬ್ಲ್ಯೂ- 1

(ದಿನಾಂಕ 09-08-2018 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು.)

**ಮುಖ್ಯ ವಿಚಾರಣೆ ವಾದಿ ಪರ ವಕೀಲರಾದ ಶ್ರೀ ಬಿ.ಬಿ.ಆರ್. ವಕೀಲರಿಂದ:**

ನನ್ನ ಮುಖ್ಯ ಪ್ರಮಾಣ ಪತ್ರದಲ್ಲಿರುವ ಬರೆದಿರುವ ಎಲ್ಲಾ ವಿಷಯಗಳು ಸರಿ ಮತ್ತು ಸತ್ಯವಾಗಿರುತ್ತವೆ ಮತ್ತು ಸಹಿಗಳು ನನ್ನವೆ ಇರುತ್ತವೆ. ದಾವಾ ಅಸ್ತಿಗೆ ಸಂಬಂದಪಟ್ಟಂತೆ 26-07-1988 ರ ಮೂಲ ಕ್ರಯ ಪತ್ರ, ಕಂದಾಯ ರಸೀದಿ, 09-03-1991 ರ ಮನೆಯ ನಡುವಿನ ಗೊಡೆಯ ಕರಾರು, ನಕ್ಷೆ, ರಫ್ ಸ್ಕೆಚ್, ದಿನಾಂಕ 24-05-2016 ರಂದು ಪುರಸಭ ಆಡಳಿತ ಅಧಿಕಾರಿಗೆ ನೀಡಿದಂತಹ ಮನವಿ, ದಾವಾ ಆಸ್ತಿಗೆ ಸಂಬಂದಪಟ್ಟಂತೆ ಪೊಟೊ ಮತ್ತು ಸಿಡಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ 1 ರಿಂದ ನಿಪಿ 32 ಎಂದು ಗುರುತಿಸಲಾಯಿತು. ದಾವೆಯಲ್ಲಿ ಕೇಳೀರುವಂತೆ ದಾವೆಯನ್ನು ಡಿಕ್ರಿ ಮಾಡಲು ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲು ಮಾಡಲು ಪ್ರತಿವಾದಿ ಪರ ವಕೀಲರು ಸಮಯವಕಾಶ ಕೋರಿರುವರು ಅನುಮತಿಸಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ಹಗರಿಬೊಮ್ಮನಹಳ್ಳಿ.